ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಶ್ರೀರಂಗಪಟ್ಟಣ

ಸಿ.ಸಿ.288-2013

| | | | |
|---|---|---|---|
| ಸಾಕ್ಷಿಯ ಹೆಸರು | : ಜಿ. ಕೃಷ್ಣೇಗೌಡ | ಪ್ರಾ ಸಾ : | 04 |
| ತಂದೆ/ಗಂಡನ ಹೆಸರು | : ಲೇ. ಪಿ.ದಾಸೇಗೌಡ | ಚಾ ಸಾ : | 05 |
| ವಯಸ್ಸು | : 61 ವರ್ಷ | | |
| ವೃತ್ತಿ | : ನಿವೃತ್ತ ನಿರ್ವಾಹಕ | | |
| ವಾಸಸ್ಥಳ | : ಬಾಬುರಾಯನ ಕೊಪ್ಪಲು | | |

ಸಾಕ್ಷಿಗೆ ದಿನಾಂಕಃ 28.10.2021 ರಂದು ಪ್ರಮಾಣ ವಚನ ನೀಡಲಾಯಿತು

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ

ನಾನು 1993 ರಿಂದ 2013 ರ ಇಸವಿಯವರೆಗೆ ನಗರ ಸಾರಿಗೆ 2 ನೇ ಘಟಕ ಕುವೆಂಪು ನಗರ ಮೈಸೂರಿನಲ್ಲಿ ನಿರ್ವಾಹಕನಾಗಿ ಕೆಲಸ ನಿರ್ವಹಿಸುತ್ತಿದ್ದೆನು.

ಚಾ ಸಾ 1 ರವರು ಗೊತ್ತು. ಚಾ ಸಾ 1 ರವರು ಮೈಸೂರು ನಗರ ಸಾರಿಗೆ ಮೈಸೂರು ನಗರದಲ್ಲಿ ನಿರ್ವಾಕರಾಗಿದ್ದರು.

ಸಾಕ್ಷಿಗೆ ಅಮಾನತ್ತು ಮಹಜರ್ ಅನ್ನು ತೋರಿಸಲಾಗಿ ಸಾಕ್ಷಿ ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದರಿಂದ ನಿಪಿ 3 ಎಂದು, ಅದರಲ್ಲಿರುವ ಸಹಿಯನ್ನು ನಿಪಿ 3 ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿ. 09.11.2011 ರಲ್ಲಿ ನಾನು ನಿಪಿ 3 ಕ್ಕೆ ನಾನು ಶ್ರೀರಂಗಪಟ್ಟಣ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಚಾ ಸಾ 1 ರವರು ಈ ಪ್ರಕರಣದ ಗಲಾಟೆಯ ಸಂಬಂಧ ತಾವು ಧರಿಸಿದ್ದಸಮವಸ್ತ್ರದ ಜೇಬು ಹರಿದುಹೋಗಿರುವ ಅರ್ಧ ತೋಳಿನ ಸಮವಸ್ತ್ರದ ಖಾಕಿ ಶರ್ಟನ್ನು ಚಾ ಸಾ 1 ರವರು ಪೋಲಿಸರಿಗೆ ಹಾಜರುಪಡಿಸಿದ ಮೇರೆಗೆ ಪೋಲಿಸರುನನ್ನ ಸಮಕ್ಷಮ ಬೆ.10.30 ಗಂಟೆ ಯಿಂದ 11.00 ಗಂಟೆ ವರೆಗೆ ಅಮಾನತ್ತು ಮಹಜರ್ ಕ್ರಮ

ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಸಾಕ್ಷಿ ನ್ಯಾ.ದ ಮುಂದೆ ಇರುವ ಮು ಮಾ 1 ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲುಃ  ಆರೋಪಿ ಪರ ವಕೀಲರಿಂದ</u>**

ನಾನು ಮತ್ತು ಚಾ ಸಾ 1 ರವರು ಸ್ನೇಹಿತರು ಎಂದರೆ ಸರಿಯಲ್ಲ, ಸಾಕ್ಷಿಯು ಸಹೋದ್ಯೋಗಿ ಎಂದು ನುಡಿಯುತ್ತಾರೆ. ನಾನು ಪೋಲಿಸ್ ಠಾಣೆಗೆ ಯಾವ ದಿನಾಂಕದಂದು ಹೋಗಿರುತ್ತೇನೆ ನೆನಪಿಲ್ಲ, ಇಂದು ನಾನು ದಿನಾಂಕವನ್ನು ಬೇರೆಯವರು ಹೇಳಿದ್ದನ್ನು ನೆನಪಿಟ್ಟುಕೊಂಡು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನಗೆ ಯಾವುದೇ ನೋಟೀಸ್ ನೀಡಿಲ್ಲ ಎಂದರೆ ಸರಿ. ಗಲಾಟೆಯ ವಿಚಾರವನ್ನು ನನಗೆ ಚಾಲಕ ಹಾಗೂ ನಿರ್ವಾಹಕ ಪೋನ್ ಮುಖಾಂತರ ತಿಳಿಸಿರುತ್ತಾರೆ. ಠಾಣೆಗೆ ಬರುವಂತೆ ನನಗೆ ನಿರ್ವಾಹಕರು ತಿಳಿಸಿರುತ್ತಾರೆ. ಮು ಮಾ 1 ಸಾಮಾನ್ಯವಾಗಿ ಎಲ್ಲರ ಬಳಿ ಸಿಗುತ್ತದೆ ಎಂದರೆ ಸಾಕ್ಷಿಯು ಅದು ಸಮವಸ್ತ್ರವಾಗಿರುವುದರಿಂದ ಕರ್ತವ್ಯದಲ್ಲಿರುವಾಗ ಮಾತ್ರ ಧರಿಸುತ್ತೇವೆ ಎಂದು ನುಡಿಯುತ್ತಾರೆ. ಮು ಮಾ 1 ಚಾ ಸಾ 1 ರವರಿಗೆ ಸೇರಿದ್ದು ಎಂದು ತೋರಿಸಲು ಯಾವುದಾದರೂ ವಿಶೇಷವಾದ ಗುರುತು ಇದೆಯಾ ಎಂದರೆ ಸಾಕ್ಷಿಯು ಜೇಬು ಹರಿದುಹೋಗಿರುತ್ತದೆ ಎಂದು ನುಡಿಯುತ್ತಾರೆ. ಮು ಮಾ 1 ರ ಜೇಬನ್ನು ಯಾರು ಬೇಕಾದರು ಹರಿದುಹಾಕಬಹುದು ಎಂದರೆ ಸರಿ. ಯಾವುದೇ ಒಂದು ಶರ್ಟನ್ನು ಬಲವಾಗಿ ಹಿಡಿದು ಎಳೆದಾಗ ಅದು ಮುದುಡಿಕೊಳ್ಳುತ್ತದೆ ಎಂದರೆ ಸರಿ. ಮು ಮಾ 1 ನ್ನು ಸಾಕ್ಷಿಗೆ ತೋರಿಸಲಾಗಿ ಮು ಮಾ 1 ಮುದುಡಿಕೊಂಡಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಜೇಬು

ಹರಿದುಹೋಗಿದೆ ಎಂದು ನುಡಿಯುತ್ತಾರೆ. ಮು ಮಾ 1 ಮುದುಡಿಕೊಳ್ಳದಿದ್ದರೂ ಚಾ ಸಾ 1 ರವರಿಗೆ ಸಹಾಯವಾಗಲಿ ಎಂದು ಹಾಲಿಕೆ ಉತ್ತರ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ 3 ರ ಅಂಶಗಳನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಿಪಿ 3 ನ್ನು ಜರುಗಿಸುವಾಗ ಚಾಲಕ, ನಿರ್ವಾಹಕ ಹಾಗೂ ಪೋಲಿಸರು ಹಾಜರಿದ್ದರು, ಹಾಜರಿದ್ದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ನಿಪಿ 3 ರ ಅಂಶಗಳನ್ನು ನಾನು ಓದಿ ತಿಳಿದುಕೊಂಡಿಲ್ಲ ಹಾಗಾಗಿ ಪೋಲಿಸರ ಹೆಸರು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಅಮಾನತ್ತು ಮಹಜರ್ ಕ್ರಮ ಜರುಗಿಸಲಿಲ್ಲ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ, ನಾನು ಚಾ ಸಾ 1 ರವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ. ಓ. ಹೇ. ಸ. ಒ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ.